ದಿನಾಂಕಃ 09.06.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು: ವಾದಿ ಪರ ಶ್ರೀ ಬಿ.ಜಿ. ವಕೀಲರಿಂದ:</u>**

1. ನೀವು ಕೊಂಡುಕೊಂಡಿರುವ ಜಮೀನು ಮೂಲತಃ ಸ.ನಂ.250. ಸ.ನಂ.250 ರ ಮೂಲ ಸ.ನಂ. ನನಗೆ ಗೊತ್ತಿಲ್ಲ.

2. ನಾನು ಜಮೀನನ್ನು ಖರೀದಿ ಮಾಡುವ ಮುಂಚೆ ವಕೀಲರ ಕಾನೂನು ಸಲಹೆ ಪಡೆದಿಲ್ಲ.

3. ನೀವು ಖರೀದಿ ಮಾಡುವ ಸಮಯದಲ್ಲಿ ಜಮೀನಿನಲ್ಲಿ ಯಾವ ಬೆಳೆ ಇತ್ತು ಎಂದರೆ? ಕಾಫೀ, ಅಡಿಕೆ ಮತ್ತು ಮೆಣಸು ಇತ್ತು ಎಂದು ನುಡಿಯುತ್ತಾರೆ. ಸದರಿ ಬೆಳೆಗಳನ್ನು ಬಿಟ್ಟರೆ ಬೇರೆ ಏನೂ ಇರಲಿಲ್ಲ ಎಂದರೆ ಸರಿ. ಆ ಸಂದರ್ಭದಲ್ಲಿ ಪಹಣಿಯಲ್ಲಿ ಯಾವ ಬೆಳೆ ಇತ್ತು ಎಂದು ನಾನು ಪರಿಶೀಲನೆ ಮಾಡಿಲ್ಲ.

4. ವಾದಿಯವರ ದಾವ ಸ್ವತ್ತಿನ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ನೀವು ಖರೀದಿ ಮಾಡಿರುವ ಜಮೀನಿನ ಚೆಕ್ಕುಬಂದಿ ಗೊತ್ತ ಎಂದರೆ? ನನಗೆ ಗೊತ್ತಾಗುವುದಿಲ್ಲ. ಒಂದು ಕಡೆ ರಸ್ತೆ.

5. ವಾದಿಯರ ತೋಟ ನಮ್ಮ ಜಮೀನಿನ ಯಾವ ದಿಕ್ಕಿಗೆ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಅದರ ಕೆಳಗಡೆ ಇದೆ ಎಂದು ನುಡಿಯುತ್ತಾರೆ.

6. ನಾನು 1 ನೇ ಪ್ರತಿವಾದಿ ಗಾಯಿತ್ರಿ ರವರಿಂದ ಜಮೀನನ್ನು ಕೊಂಡಿರುತ್ತೇನೆ.

7. ಖರೀದಿ ಮಾಡುವ ಪೂರ್ವದಲ್ಲಿ ಜಮೀನನ್ನು ಸರ್ವೇ ಮಾಡಿಸಿದ್ದೆವು. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇವೆ.

8. ಸದರಿ ಸರ್ವೇ ಮಾಡುವ ಮುಂದೆ ಹಾಜುಬಾಜುದಾರರಿಗೆ ನೋಟೀಸು ಜಾರಿ ಮಾಡಲಾಯಿತು.

9. ನೀವು ಖರೀದಿ ಮಾಡುವ ಮುಂಚೆ ಈ ದಾವ ಹಾಕಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

10. 1 ನೇ ಪ್ರತಿವಾದಿ ಜೀವಂತ ಇದ್ದಾರೆ ಎಂದರೆ ಸರಿ. ಅವರ ಪರವಾಗಿ ದಾವ ನಡೆಸಲು ನನಗೆ ಅಧಿಕಾರ ಪತ್ರ ಕೊಟ್ಟಿಲ್ಲ.

11. ದಾವ ಪೂರ್ವದಲ್ಲಿ ದಾವ ಸ್ವತ್ತು ಅಳತೆಯಾಗಿರುವ ಬಗ್ಗೆ ನನಗೆ ಮಾಹಿತಿ ಇಲ್ಲ.

12. 1 ನೇ ಪ್ರತಿವಾದಿ ದಾವ ಸ್ವತ್ತು ಮತ್ತು ನೀವು ಕೊಂಡಂತ ಜಮೀನನ್ನು ಭೂಮಾಪಕರೊಂದಿಗೆ ಶರೀಖಾಗಿ ಅಳತೆ ಮಾಡಿಸಿ ಸುಳ್ಳು ವರದಿಯನ್ನು ಪಡೆದಿರುತ್ತಾರೆ ಎಂದರೆ ಅದು ನನಗೆ ಗೊತ್ತಿಲ್ಲ.

13. ಸ.ನಂ.55 ರಲ್ಲಿ ಒಟ್ಟು 50-60 ಎಕರೆ ಜಮೀನು ಇದೆ ಎಂದರೆ ಸರಿ. ಸದರಿ ಸ.ನಂ. ಕೆಲವು ಭಾಗ 250 ಮತ್ತು 235 ಎಂದು ಹೊಸ ಸ.ನಂ. ಆಗಿದೆ ಎಂದರೆ ಸರಿ. ಸದರಿ ಪೋಡಿ ಕಾರ್ಯದಲ್ಲಿ ವಾದಿಯವರಿಗೆ ಸೇರಿದ ಜಾಗವನ್ನು ನೀವು ಖರೀದಿ ಮಾಡಿರುವ ಜಾಗದ ಕಡೆಗೆ 2 3/4 ಗುಂಟೆ

ಸೇರಿಸಿದ್ದಾರೆ ಎಂದರೆ ಸರಿಯಲ್ಲ.

14. ನಿಪಿ-4 ಮತ್ತು 5 ರಲ್ಲಿ ಒಂದು ಇಂಚಿಗೆ ಒಂದು ಚೈನ್ ಮತ್ತು ಒಂದು ಚೈನ್ ಗೆ 1.4 ಇಂಚು ಎಂದು ನಮೂದಾಗಿದೆ ಎಂದರೆ ಗೊತ್ತಿಲ್ಲ.

15. ಸದರಿ ಕಾರಣದಿಂದ ವಾದಿಗೆ ಸೇರಿದ 14 ಗುಂಟೆ ಜಮೀನು ಕಡಿಮೆಯಾಗಿದೆ ಎಂದರೆ ಗೊತ್ತಿಲ್ಲ.

16. ನೀವು ತಕರಾರು ಮಾಡಿದ್ದರಿಂದ ದಿ.01.10.2024 ರಂದು ಪುನಃ ತತ್ಕಲ್ ಪೋಡಿಯನ್ನು ವಾದಿ ಮಾಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

17. ನೀವು ವಾದಿ ನೀಡಿದ ಕೋರ್ಟ್ ನೋಟೀಸು ಮತ್ತು ಸರ್ವೇ ಅಧಿಕಾರಿಗಳು ನೀಡಿದ್ದ ನೋಟೀಸನ್ನು ಉದ್ದೇಶಪೂರ್ವಕವಾಗಿ ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ಸರ್ವೇಯರ್ ಅವರ ವರದಿಯಲ್ಲಿ ತಿಳಿಸಿದ್ದಾರೆ ಎಂದರೆ? ನಾನು ಆ ದಿನ ಊರಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ.

18. ನಿಮಗೆ ದೂರವಾಣಿ ಮೂಕಾಂತರವೂ ಸಹಾ ತಿಳಿಸಲಾಗಿದೆ ಎಂದರೆ ಸರಿಯಲ್ಲ.

19. ವಾದಿ ಮತ್ತು 1 ನೇ ಪ್ರತಿವಾದಿ ಅವರ ಜಮೀನುಗಳಿಗೆ ಹೋಗಲು ಒಂದೇ ಗೇಟನ್ನು ಉಪಯೋಗಿಸುತ್ತಿದ್ದರು ಎಂದರೆ ಸರಿಯಲ್ಲ.

20. ನಿಮ್ಮ ಜಮೀನಿಗೆ ನೀವು ಹೊಸದಾಗಿ ಗೇಟನ್ನು ಮಾಡಿಕೊಂಡು ಓಡಾಡುತ್ತಿದ್ದೀರ ಎಂದರೆ ಹಳೇಯದನ್ನು ರಿಪೇರಿ ಮಾಡಿಸಿಕೊಂಡು ಓಡಾಡುತ್ತಿದ್ದೇವೆ ಎಂದು ನುಡಿಯುತ್ತಾರೆ.

21. ವಾದಿ ಅವರಿಗೆ ಸೇರಬೇಕಾದ 14 ಗುಂಟೆ ಜಾಗದ ತಮಗೆ ತಿಳಿಸಿದ್ದಾರೆ ಎಂದರೆ ಸರಿಯಲ್ಲ.

22. ನಾವು ಖರೀದಿ ಮಾಡಿದ ಮೇಲೆ ಮನೆಯನ್ನು ನವೀಕರಿಸಿದ್ದೀರ ಎಂದರೆ ಸರಿಯಲ್ಲ.

23. 1 ನೇ ಪ್ರತಿವಾದಿ ನಿಮ್ಮ 14 ಗುಂಟೆಗೆ ತೊಂದರೆ ಮಾಡುವುದಿಲ್ಲ ಎಂದು ತಿಳಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

24. ದಾವ ಜಮೀನಿನ ಬಗ್ಗೆ ವಿವಾದ ಇದೆ ಎಂದು ಗೊತ್ತಿದ್ದರೂ ಸಹಾ ನೀವು ಖರೀದಿ ಮಾಡಿದ್ದೀರ ಎಂದರೆ ಸರಿಯಲ್ಲ.

25. ನೀವು ಕೃಷಿ ಮಾಡುವ ಸಂದರ್ಭದಲ್ಲಿ ವಾದಿಯು ವ್ಯಾಜ್ಯದ ಬಗ್ಗೆ ತಿಳಿಸಿದ್ದರು ಎಂದರೆ ಸರಿಯಲ್ಲ.

26. ದಿ.01.10.2024 ರಲ್ಲಿ ಮಾಡಿರುವ ಸರ್ವೇ ಕಾರ್ಯದಂತೆ ನೀವು 2¾ ಗುಂಟೆ ವಾದಿಯ ಜಮೀನನ್ನು ಒತ್ತುವರಿ ಮಾಡಿದ್ದೀರ ಎಂದರೆ ಸರಿಯಲ್ಲ.

27. ನಿಡಿ-2 ರಲ್ಲಿರುವ ಗೇಟು ನೀವು ಹೊಸದಾಗಿ ನಿರ್ಮಾಣ ಮಾಡಿರುವ ಗೇಟು ಎಂದರೆ, ಇಲ್ಲ ಹಳೇ ಗೇಟನ್ನು ರಿಪೇರಿ ಮಾಡಿಸಿದ್ದೇವೆ ಎಂದು ನುಡಿಯುತ್ತಾರೆ.

28. ನಿಡಿ-3 ರಲ್ಲಿರುವ ಗೇಟು ಹಳೇ ಗೇಟಾಗಿದ್ದು ಅದನ್ನು ಗಾಯತ್ರಿರವರು ಉಪಯೋಗಿಸುತ್ತಿದ್ದರು ಎಂದರೆ ಸರಿಯಲ್ಲ. ಸದರಿ ವಿಚಾರ ಗೊತ್ತಿದ್ದರೂ ಸಹಾ ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರ ಎಂದರೆ ಸರಿಯಲ್ಲ.

29. ನೀವು ಖರೀದಿ ಮಾಡಿದ ನಂತರ ನಿಮ್ಮ ಖಾಸಗಿತನ ಕಾಪಾಡಿಕೊಳ್ಳಲು ಖಾಸಗಿ ಗೇಟನ್ನು ನಿರ್ಮಾಣ ಮಾಡಿಕೊಂಡಿದ್ದೀರ ಎಂದರೆ ಸರಿಯಲ್ಲ.

30. 1 ನೇ ಪ್ರತಿವಾದಿಯ ಪರವಾಗಿ ಸಾಕ್ಷಿ ನುಡಿಯಲು ನನಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

31. ದಾವ ವಿದ್ಯಾಮಾನ ಗೊತ್ತಿದ್ದರೂ ಸಹಾ ನೀವು ಉದ್ದೇಶಪೂರ್ವಕವಾಗಿ ಒಂದು ವರ್ಷ ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದರೆ ಸರಿಯಲ್ಲ.

32. ನೀವು ಖರೀದಿ ಮಾಡುವ ಮುಂಚೆ ವ್ಯಾಜ್ಯ ಇರುವ ಬಗ್ಗೆ ಪರಿಶೀಲಿಸಿದ್ದೀರ ಎಂದರೆ ಪರಿಶೀಲಿಸಿಲ್ಲ.

33. ನೀವು ಮತ್ತು 1 ನೇ ಪ್ರತಿವಾದಿ ಸೇರಿಕೊಂಡು ದಿ.02.03.2021 ರಂದು ವಾದಿ ಇಲ್ಲದಾಗ ಹೊಸದಾಗಿ ಬೇಲಿ ಮತ್ತು ಗೇಟನ್ನು ನಿರ್ಮಾಣ ಮಾಡಲು ಸಲಕರಣಗೆಗಳನ್ನು ಸಂಗ್ರಹಿಸಿರುತ್ತೀರ ಎಂದರೆ ಸರಿಯಲ್ಲ. ನಾವು ಕೊಂಡುಕೊಳ್ಳುತ್ತೇವೆ ಎಂದು ಹೇಳಿದಾಗ 1 ನೇ ಪ್ರತಿವಾದಿಯೇ ಬೇಲಿ ಹಾಕಿಸಿರುತ್ತಾರೆ ಎಂದು ನುಡಿಯುತ್ತಾರೆ.

34. ಆ ಸಂದರ್ಭದಲ್ಲಿ ವಾದಿಯವರು ನಿಮಗೆ ಫೋನ್ ಮೂಲಕ ದಿ.04.03.2021 ರಂದು ವ್ಯಾಜ್ಯದ ಬಗ್ಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ನೀವು ಅಸಂಬದ್ಧ ಉತ್ತರ ನೀಡಿರುತ್ತೀರಿ ಎಂದರೆ ಸರಿಯಲ್ಲ.

35. ನೀವು ಹೊಸಗೇಟನ್ನು 2¾ ಗುಂಟೆ ಒತ್ತುವರಿ ಮಾಡಿ ನಿರ್ಮಾಣ ಮಾಡಿದ್ದೀರ ಎಂದರೆ ಸರಿಯಲ್ಲ.

36. ವಾದಿಗೆ ಸೇರಿದ ಜಮೀನು ನೀವು ಒತ್ತುವರಿ ಮಾಡಿಕೊಂಡಿದ್ದರೆ ಬಿಟ್ಟುಕೊಡುತ್ತೀರ ಎಂದರೆ? ಒತ್ತುವರಿ ಮಾಡಿಲ್ಲ, ಮಾಡಿದ್ದರೆ ಬಿಟ್ಟುಕೊಡುತ್ತೇವೆ ಎಂದು ನುಡಿಯುತ್ತಾರೆ.

37. ಖರೀದಿ ಮಾಡುವ ಮುಂಚೆ ನಾವು ಸರ್ವೇ ಮಾಡಿಸಿಲ್ಲ, ಆದರೆ ಮುಂಚೆ ಮಾಡಿಸಿದ್ದೇವು. ಮುಂಚೆ ಸರ್ವೇ ಮಾಡಿಸಿದ ದಿನಾಂಕ ನನಗೆ ನೆನಪಿಲ್ಲ ಹಾಗೂ ಯಾರು ಮಾಡಿದ್ದರು ಎಂದು ನನಗೆ ನೆನಪಿಲ್ಲ.

38. ವಾದಿಯವರಿಗೆ ಸೇರಿದ ಜಮೀನಿನ ಮೇಲೆ ನಿಮಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿ.

39. ನೀವು ಖರೀದಿ ಮಾಡಿರುವ ಜಮೀನಿನಲ್ಲಿ ಉಳುಮೆ ಪೂರ್ವ-ಪಶ್ಚಿಮ ಮುಖವಾಗಿದೆಯೋ ಅಥವಾ ಉತ್ತರ-ದಕ್ಷಿಣ ಮುಖವಾಗಿದೆಯಾ ಎಂದರೆ ನನಗೆ ಗೊತ್ತಿಲ್ಲ.

**<u>ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.